# ‘ಯಲ್ಲಮ್ಮನ ಕೋಪ ಕಡು ಕಷ್ಟ

**ಅನನ್ಯಾ**
**ಸ್ಟಾರ್ ಸುವರ್ಣದ ‘ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ’ದ ಯಲ್ಲಮ್ಮ**

◆ **ನಿಮ್ಮ ಪರಿಚಯ ಹೇಳಿ?**

ನಮ್ಮದು ಮೂಲತಃ ಧರ್ಮಸ್ಥಳ. ಮೈಸೂರಿನಲ್ಲಿ ನೆಲೆಸಿದ್ದೇವೆ. ಅಪ್ಪ ವಿಶ್ವನಾಥ್ ವ್ಯಾಪಾರ ಮಾಡುತ್ತಾರೆ. ಅಮ್ಮ ಪಲ್ಲವಿ ಗೃಹಿಣಿ. ನನ್ನ ಯಕ್ಷಗಾನದ ಪ್ರೀತಿ ಅಭಿನಯ ಲೋಕವನ್ನು ಪರಿಚಯಿಸಿತು. ಈಗ ಹತ್ತನೇ ತರಗತಿಯಲ್ಲಿ ಓದುತ್ತಿದ್ದೇನೆ. ಯಕ್ಷಗಾನದಲ್ಲಿ ಆಡುತ್ತಿರುವುದನ್ನು ನೋಡಿ ಅಪರಿಚಿತರೊಬ್ಬರು ಸಿನಿಮಾಕ್ಕೆ ಆಡಿಷನ್ ಕರೆದಿದ್ದರು. ಅವರು ಸಿನಿಮಾರಂಗದವರೇ ಆಗಿದ್ದರು. ಅದರಲ್ಲಿ ನನ್ನನ್ನು ಆಯ್ಕೆ ಮಾಡಿದರು. ಅದೇ ನನ್ನ ಮೊದಲ ಸಿನಿಮಾ. ನಂತರ ಆಡಿಷನ್ ನೀಡುತ್ತಲೇ ಸಿನಿಮಾ ಮತ್ತು ಧಾರಾವಾಹಿಗಳಲ್ಲಿ ಬೇರೆ ಪಾತ್ರಗಳನ್ನು ಹಿಡಿಯುವಲ್ಲಿ ಯಶಸ್ವಿಯಾದೆ.

◆ **ನಟನೆಯಿಂದ ಓದುವುದಕ್ಕೆ ತೊಂದರೆ ಆಗುವುದಿಲ್ಲವೇ? ನಿಮ್ಮಾಸೆ ಏನಿದೆ?**

ಸದ್ಯ ತೊಂದರೆ ಏನೂ ಆಗುತ್ತಿಲ್ಲ. ನನ್ನ ಶಾಲೆಯಲ್ಲಿ ಅಧ್ಯಾಪಕರ ಸಹಕಾರ ಚೆನ್ನಾಗಿದೆ. ಸ್ನೇಹಿತರು ನೋಟ್ಸ್ ಕೊಡುತ್ತಾರೆ. ಶೂಟಿಂಗ್ ಮನೆಯಲ್ಲೂ ನನಗೆ ಬಿಡುವು ಇದ್ದಾಗ ಓದುವುದು ಬರೆಯುವುದನ್ನು ಮಾಡುತ್ತಿರುತ್ತೇನೆ. ಅದೇನೂ ತೊಂದರೆ ಅಂತ ಅನ್ನಿಸಿಲ್ಲ. ಸಮಾಜ ವಿಜ್ಞಾನ ಓದಿನಲ್ಲಿ ನನಗೆ ತುಂಬ ಆಸಕ್ತಿ ಇದೆ. ಡಿಸಿ ಆಗಬೇಕು ಎನ್ನುವ ಆಸೆ ಚಿಕ್ಕಂದಿನಿಂದಲೂ ಇದೆ. ಮುಂದೆ ವಾಣಿಜ್ಯ ವಿಷಯದಲ್ಲಿ ಪದವಿಯನ್ನು ತೆಗೆದುಕೊಳ್ಳಬೇಕು. ನಟನೆಯ ರಂಗಕ್ಕೆ ಬಂದ ನಂತರ ಒಳ್ಳೆಯ ಕಲಾವಿದೆ ಆಗಬೇಕು, ನಾಯಕಿಯಾಗಬೇಕು ಎಂದು ಅನ್ನಿಸುತ್ತಿದೆ. ಆದರೆ ನಾಯಕಿ ಆಗದಿದ್ದರೆ ಜಿಲ್ಲಾಧಿಕಾರಿ ಆಗುವ ಆಸೆಯನ್ನು ಈಡೇರಿಸಿಕೊಳ್ಳುತ್ತೇನೆ.

◆ **ನಿಮ್ಮ ಪಾತ್ರ ಹೇಗಿದೆ?**

ಯಲ್ಲಮ್ಮನ ಪಾತ್ರ ಭಿನ್ನವಾಗಿದೆ. ತುಂಬ ಕಠಿಣ ಪಾತ್ರ. ಯಲ್ಲಮ್ಮನಿಗೆ ಕೋಪ ಜಾಸ್ತಿ. ಅವಳ ಕೋಪ ಬೇರೆ ಯಾರಿಗೂ ಇಲ್ಲ. ಅಂತಹ ರೋಷದ ಕೋಪವನ್ನು ನಾನು ತೋರಿಸಬೇಕು. ಮೇಕಪ್ ಮಾಡಿ ಕ್ಯಾಮೆರಾ ಮುಂದೆ ನಿಂತಾಗ ನಾನು ಅನನ್ಯಾ ಅನ್ನುವುದನ್ನು ಮರೆತು ಬಿಡುತ್ತೇನೆ. ಹಾಗೆ ಯೋಚನೆ ಮಾಡಿ ನಟಿಸಿದಾಗಲೇ ಅದು ಸುಲಭ ಆಯಿತು. ಸ್ವಭಾವತಃ ನನಗೆ ಭಯದ ಭಾವನೆ ಹೆಚ್ಚಿದೆ. ಯಲ್ಲಮ್ಮನ ವೇಷ ಹಾಕಿದಾಗ ಭಯ ಆಗಲಿಲ್ಲ. ಫೈಟ್ ಸಂದರ್ಭದಲ್ಲಿ ಇರಬಹುದು, ರೋಪ್ ಎಸೆಯುವಾಗ ಬೆಂಕಿಯ ದೃಶ್ಯದಲ್ಲೂ ಹೆದರಲಿಲ್ಲ. ಬೆಂಕಿಗೆ ಹೆದರುವ ನಾನು ಭಯಪಡದೆ ಲೀಲಾಜಾಲವಾಗಿ ಪಾತ್ರಕ್ಕೆ ಸೂಕ್ತವಾಗಿ ನಟಿಸಿದೆ. ಕೆಲವೊಮ್ಮೆ ರಕ್ತ ಬರುತ್ತದೆ ಅಂತಹ ಸನ್ನಿವೇಶವೂ ನನ್ನನ್ನು ಎದೆಗುಂದಿಸಲಿಲ್ಲ. ಒಟ್ಟಾರೆ ಯಲ್ಲಮ್ಮ ಪಾತ್ರ ತುಂಬ ಇಷ್ಟ ಆಯಿತು.

◆ **ನಟಿಯಾದ ನಂತರ ಶಾಲೆಯ ವಾತಾವರಣ ನಿಮಗೆ ಹೇಗೆನಿಸುತ್ತಿದೆ?**

ನನ್ನ ಸ್ನೇಹಿತರು ತುಂಬ ಬೆಂಬಲವನ್ನು ನೀಡುತ್ತಾರೆ. ನನ್ನ ಈ ಧಾರಾವಾಹಿಯ ಪ್ರೋಮೊ ನೋಡಿ ಸ್ನೇಹಿತರು ತುಂಬ ಖುಷಿಪಟ್ಟಿದ್ದಾರೆ. ಅದನ್ನು ನೋಡಿ ಅವರು ಫೋನ್ ಮಾಡಿ ನನ್ನನ್ನು ಅಭಿನಂದಿಸಿದ್ದಾರೆ. ಫೋಟೊ ಚೆನ್ನಾಗಿದೆ. ಹೀಗೆ ಬೆಳೆಯಬೇಕು. ಮುಂದೆ ಸಿನಿಮಾದಲ್ಲಿ ನಿನಗೆ ದೊಡ್ಡ ಅವಕಾಶ ಸಿಗಬೇಕು ಎಂದು ಹರಸಿದ್ದಾರೆ. ಶಿಕ್ಷಕರೂ ಖುಷಿಪಟ್ಟಿದ್ದಾರೆ. ಶಾಲೆಗೆ ಹೋದ ತಕ್ಷಣ ಶಿಕ್ಷಕರು ಅಭಿನಂದಿಸಿದ್ದಾರೆ. ‘ಕಾಟೇರ’ ಸಿನಿಮಾದಲ್ಲೂ ಮಾಡುತ್ತಿದ್ದೇನೆ ಅನ್ನುವುದನ್ನೇ ಕೆಲವರು ನಂಬಿರಲಿಲ್ಲ. ಸಿನಿಮಾ ನೋಡಿದ ಮೇಲೆ ‘ನೀನೇ ಅಲ್ವಾ ಶ್ರುತಿ ಮೇಂಡ ಮಗಳು’ ಎಂದು ಅಚ್ಚರಿಯನ್ನು ವ್ಯಕ್ತಪಡಿಸಿದ್ದಾರೆ. ಅದೆಲ್ಲ ಅವರಿಗೆ ಹೆಮ್ಮೆ ಅನಿಸಿದೆ. ಸುದೀಪ್ ಅವರ ಜೊತೆ ‘ಮ್ಯಾಕ್ಸ್’ ಸಿನಿಮಾದಲ್ಲಿ ಮಾಡುತ್ತಿದ್ದೇನೆ. ನನ್ನ ಅನೇಕ ಸ್ನೇಹಿತರು ಒಮ್ಮೆ ಅವರನ್ನು ಭೇಟಿ ಮಾಡಿಸು, ಅವರಂತೆ ನೀನು ದೊಡ್ಡದಾಗಿ ಕಾಣಬೇಕು ಎಂದು ಹೇಳಿದ್ದಾರೆ. ಶಿಕ್ಷಕರು ಅಭಿನಯ ಕಲೆಯನ್ನು ಬೆಳೆಸಿಕೊಳ್ಳಲು ಹೇಳುತ್ತಾರೆ.

◆ **ಓಡಾಟ, ಕೆಲಸದ ಒತ್ತಡವನ್ನು ಹೇಗೆ ನಿಭಾಯಿಸುತ್ತೀರಿ?**

ಇದೆಲ್ಲ ನಿಭಾಯಿಸಲು ಹೋರಾಟ ಎಂದು ಅನ್ನಿಸುತ್ತದೆ. ಅದನ್ನು ಜಾಸ್ತಿ ತಲೆಗೆ ಹಚ್ಚಿಕೊಳ್ಳುವುದಿಲ್ಲ. ನನ್ನ ಸಮಯವನ್ನು ಸರಿಯಾಗಿ ನಿರ್ವಹಿಸುತ್ತೇನೆ. ಚಿತ್ರೀಕರಣದ ದಿನವನ್ನು ನನ್ನ ಶಿಕ್ಷಕರಿಗೆ ಮೊದಲೇ ತಿಳಿಸಿ ಅನುಮತಿ ತೆಗೆದುಕೊಳ್ಳುತ್ತೇನೆ. ಚಿತ್ರೀಕರಣಕ್ಕೆ ಅಮ್ಮ ನನ್ನನ್ನು ಸರಿಯಾದ ಸಮಯಕ್ಕೆ ಕರೆದುಕೊಂಡು ಹೋಗುತ್ತಾರೆ. ಬೆಂಗಳೂರು ಮೈಸೂರು ನಿರಂತರ ಓಡಾಟಕ್ಕೆ ಅಮ್ಮ ಇದ್ದೇ ಇರುತ್ತಾರೆ. ಅವರು ಇರುವುದರಿಂದ ಕಷ್ಟ ಎಂದು ಅನ್ನಿಸಿಲ್ಲ.

◆ **ನಿಮ್ಮ ಮುಂದಿನ ಪಾತ್ರದ ಕನಸಿನ ಬಗ್ಗೆ?**

ಈ ಪಾತ್ರ ಸಿಗುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ. ಇದೇ ಪ್ರೊಡಕ್ಷನ್‌ನ ‘ಯಡೆಯೂರು ಶ್ರೀ ಸಿದ್ದಲಿಂಗೇಶ್ವರ’ದಲ್ಲಿ ಮಾಡಿದ್ದೆ. ಅದರಲ್ಲಿ ಮಂಡ್ಯ ರಮೇಶ್ ಅವರ ಮಗಳಾಗಿದ್ದೆ. ಇದಕ್ಕೆ ಆಡಿಷನ್‌ಗೆ ಕರೆ ಬಂತು. ಸುಲಭವಾಗಿ ಆಯ್ಕೆಯಾದೆ. ಇದು ನನ್ನ ಎರಡನೇ ಪೌರಾಣಿಕ ಪಾತ್ರ. ಅಷ್ಟೇನೂ ಕಷ್ಟ ಎಂದು ಅನ್ನಿಸಲಿಲ್ಲ. ಕೋಪದ ಕಾರಣಕ್ಕೆ ನಟನೆ ಕಷ್ಟ ಎಂದು ಆರಂಭದಲ್ಲಿ ಅನ್ನಿಸಿತ್ತು. ಇದರ ಭಾಷೆ ನನಗೆ ಸರಳವೆಂದೆನಿಸಿದೆ. ಮುಂದೆ ದೊಡ್ಡ ಸ್ಟಾರ್ ನಟರ ಜೊತೆ ಸಿನಿಮಾ ಮಾಡಬೇಕು ಎನ್ನುವ ಆಸೆ ಇದೆ.

■ **ರಾಘವೇಂದ್ರ ಕೆ.**

